ಪ್ರಸ್ತುತದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯವರು ಖಾಸಗಿ ಸಂಘಗಳ ಸಹಯೋಗದೊಂದಿಗೆ, ಮಾವಳ್ಳಿಪುರದಲ್ಲಿ ವೈಜ್ಞಾನಿಕ ವಿಲೇವಾರಿ ಪ್ರದೇಶವನ್ನು ಸ್ಥಾಪಿಸುವ ಕಾರ್ಯವನ್ನು ಮತ್ತು ಮಂಡೂರಿನಲ್ಲಿ ತ್ಯಾಜ್ಯದಿಂದ ವಿದ್ಯುತ್‌ಶಕ್ತಿ ಉತ್ಪಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ.

156(338) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಲೆಕ್ಕಿಗರನ್ನೇ ಕಂಪ್ಯೂಟರ್ ಸೆಂಟರ್‌ಗೆ ನಿಯೋಜಿಸಲಾಗುತ್ತಿರುವುದರಿಂದ ಹಾಗೂ ಅವರೇ 3-4 ಗ್ರಾಮವೃತ್ತಗಳನ್ನು ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ಅವರವರ ದೈನಂದಿನ ಕಾರ್ಯಗಳಿಗಾಗಿ ಅವರನ್ನು ಸಂಪರ್ಕಿಸಲು ಊರೂರು ಅಲೆದಾಡಬೇಕಾದ ಪರಿಸ್ಥಿತಿ ಉಂಟಾಗಿರುವುದರಿಂದ ಅದನ್ನು ನಿವಾರಿಸಲು ಸರ್ಕಾರ ಯಾವ (ಯಾವ) ಕ್ರಮ ಕೈಗೊಳ್ಳಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಕಂದಾಯ ಇಲಾಖೆಯಯಲ್ಲಿ 8244 ಗ್ರಾಮಲೆಕ್ಕಿಗರ ಮಂಜೂರಾದ ಹುದ್ದೆಗಳಿದ್ದು, 7699 ಹುದ್ದೆಗಳನ್ನು ತುಂಬಲಾಗಿದೆ. ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಈ ಗ್ರಾಮಲೆಕ್ಕಿಗರ ಪೈಕಿ ಸುಮಾರು 1000 ಗ್ರಾಮಲೆಕ್ಕಿಗರನ್ನು ಪೂರ್ಣಾವಧಿ ಆಧಾರದ ಮೇರೆಗೆ ಕಂಪ್ಯೂಟರ್ ಸೆಂಟರ್‌ಗೆ ನಿಯೋಜಿಸಲಾಗಿದೆ. ಉಳಿದ ಗ್ರಾಮಲೆಕ್ಕಿಗರಿಗೆ ಈ 1000 ಗ್ರಾಮಲೆಕ್ಕಿಗರ ಹೆಚ್ಚುವರಿ ಗ್ರಾಮ ವೃತ್ತಗಳನ್ನು ವಹಿಸಲಾಗಿದೆ. ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಕ್ರಿಯೆಯು ಹಲವು ವರ್ಷಗಳಿಂದ ಸ್ಥಗಿತಗೊಂಡಿದೆ. ಇದರಿಂದ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಬಿದ್ದಿವೆ. ಈ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮಾತ್ರ ಭರ್ತಿ ಮಾಡಲಾಗುತ್ತಿದೆ. ನಿಯೋಜನೆ ಮಾಡಲಾದ ಗ್ರಾಮಲೆಕ್ಕಿಗರ ಗ್ರಾಮಕ್ಕೆ ತಾತ್ಕಾಲಿಕ ಬೇರೆ ಪ್ರಭಾರ ವ್ಯವಸ್ಥೆಯನ್ನು ಮಾಡಿ ಸಾರ್ವಜನಿಕರಿಗೆ ಅವರವರ ದೈನಂದಿನ ಕಾರ್ಯದಲ್ಲಿ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಈ ಕಂಪ್ಯೂಟರ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮಲೆಕ್ಕಿಗರಿಗೆ ಯಾವುದೇ ಹೆಚ್ಚುವರಿ ಗ್ರಾಮಗಳ ಕೆಲಸವನ್ನು ವಹಿಸಬಾರದೆಂದು ಸರ್ಕಾರವು ಎಲ್ಲ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

157(180) ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ (ವೇಮಗಲ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ವೃಂದವಾರು (ಕೇಡರ್) ಮಂಜೂರಾದ ಹುದ್ದೆಗಳೆಷ್ಟು ಹಾಗೂ ಅದರಲ್ಲೂ ವಿಶೇಷವಾಗಿ ವಾಚರ್ಸ್ ಮತ್ತು ಗಾರ್ಡ್ಸ್ ವೃದವೂ ಸೇರಿದಂತೆ ಇವುಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು (ವೃಂದವಾರು ಪ್ರತ್ಯೇಕ ವಿವರಗಳನ್ನು ನೀಡುವುದು)

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಇ) ಅರಣ್ಯ ಕಾವಲುಗಾರರ ಕೊರತೆಯಿಂದಾಗಿ ಅರಣ್ಯ ಸಂಪತ್ತು ನಷ್ಟವಾಗುತ್ತಿಲ್ಲವೇ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು (ಮಾಹಿತಿ ನೀಡುವುದು)?

ಶ್ರೀ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಭಾರತೀಯ ಅರಣ್ಯ ಸೇವೆಯ ಅಧಿಕಾರಿಗಳ ವಿವರಗಳನ್ನು ಹೊರತುಪಡಿಸಿ ಮಂಜೂರಾಗಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು "ಎ" ಅನುಬಂಧದಲ್ಲಿದೆ.

ಆ) ಪ್ರಮುಖವಾದ 80 ವಲಯ ಅರಣ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಪ್ರತಿವರ್ಷ 20 ಹುದ್ದೆಗಳಂತೆ 80 ಹುದ್ದೆಗಳಿಗೆ ನೇಮಕಾತಿ ಮಾಡಲಾಗುತ್ತಿದೆ. ಈಗಾಗಲೇ 40 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ.

ವನಪಾಲಕರ ಖಾಲಿ ಹುದ್ದೆಗಳಿಗೆ ಪ್ರತಿವರ್ಷ 75 ಹುದ್ದೆಗಳಂತೆ, ಅರಣ್ಯ ರಕ್ಷಕರ ಖಾಲಿ ಹುದ್ದೆಗಳಿಗೆ ಪ್ರತಿ ವರ್ಷ 100 ಹುದ್ದೆಗಳಂತೆ ಹಾಗೂ 2ನೇ ದರ್ಜೆ ಮೋಜಣಿದಾರರ ಖಾಲಿ ಹುದ್ದೆಗಳಿಗೆ ಪ್ರತಿ ವರ್ಷ 27 ಹುದ್ದೆಗಳಂತೆ ನೇಮಕಾತಿ ಮಾಡಲು ಅನುಮತಿಸಲಾಗಿದೆ. ಇಲ್ಲಿಯವರೆಗೆ 150 ವನಪಾಲಕರ ಹುದ್ದೆಗಳಿಗೆ 210 ಅರಣ್ಯ ರಕ್ಷಕರ ಹುದ್ದೆಗಳಿಗೆ ಮತ್ತು 54 ಎರಡನೇ ದರ್ಜೆ ಮೋಜಣಿದಾರರ ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ.

ಪ್ರಸಕ್ತ ವರ್ಷದಲ್ಲಿ 125 ವನಪಾಲಕರ ಖಾಲಿ ಹುದ್ದೆಗಳಿಗೆ 200 ಅರಣ್ಯ ರಕ್ಷಕರ ಖಾಲಿ ಹುದ್ದೆಗಳಿಗೆ ಮತ್ತು 200 ಅರಣ್ಯ ವೀಕ್ಷಕರ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ.

ಇ) ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಿ ಅರಣ್ಯ ಸಂಪತ್ತನ್ನು ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಖಾಲಿ ಹುದ್ದೆಗಳಿಗೆ ಆದ್ಯತೆ ಮೇಲೆ ನೇಮಕಾತಿ ಮಾಡಲಾಗುತ್ತಿದೆ.

ಅನುಬಂಧ–ಎ

ವಿಧಾನ ಸಭಾ ಸದಸ್ಯರ ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್) ರವರ ಪ್ರಶ್ನೆ ಸಂಖ್ಯೆ 180ಕ್ಕೆ ಕುರಿತಂತೆ

ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ (ದಿನಾಂಕ 22–03–2006)

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆಯ ಸಂಖ್ಯೆ	ಖಾಲಿ ಹುದ್ದೆ ಸಂಖ್ಯೆ
1	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು	36	–
2	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	192	–
3	ವಲಯ ಅರಣ್ಯಾಧಿಕಾರಿ	630	–
4	ವನಪಾಲಕ	2185	218
5	ಅರಣ್ಯ ರಕ್ಷಕ	3866	1234
6	ಅರಣ್ಯ ವೀಕ್ಷಕ	1094	125
7	ಸಹಾಯಕ ನಿರ್ದೇಶಕರು (ಪಶು ಸಂಗೋಪನೆ)	1	–
8	ಸಹಾಯಕ ಶಸ್ತ್ರ ಚಿಕಿತ್ಸಕರು (ಪಶು ಸಂಗೋಪನೆ)	5	–

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆಯ ಸಂಖ್ಯೆ	ಖಾಲಿ ಹುದ್ದೆ ಸಂಖ್ಯೆ
9	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	1	–
10	ಭೂ ಸಮನ್ವಯ ಅಧಿಕಾರಿ	3	2
11	ಉಪ ನಿರ್ದೇಶಕರು (ಮೋಜಣಿ)	1	1
12	ವಿಶೇಷ ತಹಸಿಲ್ದಾರ್	1	1
13	ಸಹಾಯಕ ನಿರ್ದೇಶಕರು (ಮೋಜಣಿ)	1	1
14	ಅಧೀಕ್ಷರು, (ಅರಣ್ಯ ಮೋಜಣಿ)	8	8
15	1ನೇ ದರ್ಜೆ ಮೋಜಣಿದಾರರು	18	13
16	2ನೇ ದರ್ಜೆ ಮೋಜಣಿದಾರರು	61	22
17	1ನೇ ದರ್ಜೆ ಆಕೃತಿಗಾರರು	4	1
18	2ನೇ ದರ್ಜೆ ಆಕೃತಿಗಾರರು	25	19
19	ಅರಣ್ಯ ಕೆಮಿಸ್ಟರ್	1	–
20	ಸಹಾಯಕ ಸಾಂಖ್ಯಿಕ ಅಧಿಕಾರಿಗಳು	7	–
21	ಓವರಸಿಸ್ ಜೂನಿಯರ್ ಇಂಜಿನಿಯರ್	1	–
22	ಫೋಟೋಗ್ರಾಫರ್ ಕಮ್ ಚಿತ್ರಗಾರರು	2	2
23	ಸಹಾಯಕ ಗ್ರಂಥಪಾಲಕರು	1	–
24	ಸಾಂಖ್ಯಿಕ ನಿರೀಕ್ಷಕರು	9	4
25	ದೈಹಿಕ ಶಿಕ್ಷಕರು	2	2
26	ಫಿಲ್ಮ್ ಪ್ರಾಜೆಕ್ಟರ್ ಆಪರೇಟರ್	3	–
27	ಹಿರಿಯ ವಾಹನ ಚಾಲಕರು	48	15
28	ವಾಹನ ಚಾಲಕರು	154	32
29	ಆರಕ್ಷಕರು	9	7
30	ಆನೆ ಜಮೇದಾರರು	4	2
31	ಆನೆ ಮಾಹುತ	67	27
32	ಆನೆ ಕಾವಾಡಿಗ	74	16
33	ಜಮೇದಾರ ಹಾಗೂ ಇತರರು	24	8
34	ಲಿಫ್ಟ್ ಅಟೆಂಡರ್	2	–
35	ಬಟ್ಲರ್	5	3
36	ಪಂಪ್ ಸೆಟ್ ಆಪರೇಟರ್	2	–
37	ವೈರ್‌ಲೆಸ್ ಮೆಕಾನಿಕ್ಸ್	1	1
38	ವಾಚ್‌ಮನ್	36	–
39	ಮಾಲಿ	113	23

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆಯ ಸಂಖ್ಯೆ	ಖಾಲಿ ಹುದ್ದೆ ಸಂಖ್ಯೆ
40	ಕ್ಲೀನರ್	36	17
41	ಚೌಕಿದಾರ್	1	1
42	ದಳಾಯತ್	555	34
43	ಕೇರ್‌ಟೇಕರ್	63	33
44	ಸ್ವೀಪರ್	17	15
45	ಗಾರ್ಡನರ್	4	–
46	ಮುಖ್ಯ ಲೆಕ್ಕಾಧಿಕಾರಿಗಳು	1	–
47	ಫೈನಾನ್ಸ್ ಅಸಿಸ್ಟೆಂಟ್	1	–
48	ಆಡಳಿತಾಧಿಕಾರಿ	5	4
49	ಆಡಳಿತ ಸಹಾಯಕ	11	–
50	ವ್ಯವಸ್ಥಾಪಕರು	61	10
51	ಅಧೀಕ್ಷಕರು	167	42
52	ಶೀಘ್ರಲಿಪಿಗಾರರು	26	2
53	ಪ್ರಥಮ ದರ್ಜೆ ಸಹಾಯಕರು	550	25
54	ದ್ವಿತೀಯ ದರ್ಜೆ ಸಹಾಯಕರು	374	–
55	ಹಿರಿಯ ಬೆರಳಚ್ಚುಗಾರರು	17	–
56	ಬೆರಳಚ್ಚುಗಾರರು	101	5
57	ಸ್ವಾಗತಕಾರರು	1	–
	ಒಟ್ಟು	**10688**	**1975**

ಭಾರತೀಯ ಅರಣ್ಯ ಸೇವೆಯ ಅಧಿಕಾರಿಗಳ ವಿವರವನ್ನು ಹೊರತುಪಡಿಸಿ.

158(23) ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶವಿದೆ ಹಾಗೂ ಸಾಗುವಳಿಗೊಳಪಟ್ಟಿರುವ ಅರಣ್ಯ ಪ್ರದೇಶ ಎಷ್ಟು;

ಆ) ಒತ್ತುವರಿ ಸಕ್ರಮಕ್ಕಾಗಿ ಒತ್ತಾಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಸಮಸ್ಯೆಯ ನಿವಾರಣೆಗೆ ಕೈಗೊಂಡಿರುವ ಕ್ರಮವೇನು;

ಈ) ಇದಕ್ಕೆ ಬೇಕಾಗುವ ಸಮಯಾವಕಾಶವೆಷ್ಟು?